1 ನೇ **ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಸಾಗರ**

**ಸಿಸಿ ನಂಬರು** 1207-2022

**ಸಿ.ಡಬ್ಲ್ಯು -**9, **ಪಿ.ಡಬ್ಲ್ಯು -**9

**ಸಾಕ್ಷಿದಾರರ ಹೆಸರು** : ಡಾ. ಸುಮಾ
ಗಂಡನ **ಹೆಸರು** : ಡಾ. ಮಂಜುನಾಥ್
**ವಯಸ್ಸು** : 50 ವರ್ಷ
**ಉದ್ಯೋಗ** : ಕಿವಿ, ಗಂಟಲು ಮತ್ತು ಮೂಗಿನ ತಜ್ಞರು, ಸಾಗರ ಉಪವಿಭಾಗೀಯ ಆಸ್ಪತ್ರೆ
**ವಾಸ** : ಸಾಗರ

**ಪ್ರಮಾಣೀಕರಿಸಿದ ದಿನಾಂಕ :**16.06.2026.

**ಮುಖ್ಯ ವಿಚಾರಣೆ :** ಸ.ಸ.ಅ. ರವರಿಂದ

1. ನಾನು 2016 ರಿಂದ ಇಲ್ಲಿಯವರೆಗೂ ಸಾಗರದ ಉಪವಿಭಾಗೀಯ ಸರ್ಕಾರಿ ಆಸ್ಪತ್ರೆಯಲ್ಲಿ ಕಿವಿ, ಗಂಟಲು ಮತ್ತು ಮೂಗಿನ ತಜ್ಞರಾಗಿಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿ:10.05.2022 ರಂದು ಸಂಜೆ 5.57 ನಿಮಿಷಕ್ಕೆ ಚಾಸ 1 ಮತ್ತು 2 ರವರು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗೆಂದು ತುರ್ತು ಸೇವಾ ವಿಭಾಗಕ್ಕೆ ಬಂದಿದ್ದರು. ಚಾಸ 1 ರವರನ್ನು ಪರೀಕ್ಷಿಸಿದಾಗ ಅವರ ಎಡ ಕಿಬ್ಬೊಟ್ಟೆಯ ಮೇಲೆ 10 ಸೆಂ.ಮೀ ಉದ್ದ 3 ಸೆಂ.ಮೀ ಅಗಲದ ತರಚಿದ ಗಾಯ ಹಾಗೂ ಎಡಭುಜದ ಮೇಲೆ 25 ಸೆಂ.ಮೀ. ಉದ್ದ 1 ಸೆಂ.ಮೀ. ಅಗಲದ ಹರಿದ ಗಾಯ ಕಂಡು ಬಂತು. ಚಾಸ 1 ರವರು ತಮಗೆ ಎಡಭುಜದ ಮೇಲೆ ಒಳನೋವಿರುವುದಾಗಿ ತಿಳಿಸಿದರು. ಚಾಸ 2 ರವರನ್ನು ಪರೀಕ್ಷಿಸಿದಾಗ ಅವರ ಎಡ ಭುಜದ ಮೇಲೆ ರಕ್ತ ಹೆಪ್ಪುಗಟ್ಟಿತ್ತು, ಅದರ ಅಳತೆ 8 * 2 ಸೆಂ.ಮೀ. ಆಗಿತ್ತು ಹಾಗೂ ಸೊಂಟದ ಭಾಗದಲ್ಲಿ ರಕ್ತ ಹೆಪ್ಪುಗಟ್ಟಿತ್ತು, ಅದರ ಅಳತೆ 8*2 ಸೆಂ.ಮೀ. ಆಗಿತ್ತು. ಚಾಸ 1 ಮತ್ತು 2 ರವರಿಗೆ ಆದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದವು. ಚಾಸ 1 ಮತ್ತು 2 ರವರನ್ನು 3 ದಿನಗಳವರೆಗೆ ಒಳರೋಗಿಗಳಾಗಿ ದಾಖಲಿಸಿಕೊಂಡು ಚಿಕಿತ್ಸೆಯನ್ನು ನೀಡಿರುತ್ತೇನೆ.

3. ದಿ:24.05.2022 ರಂದು ಚಾಸ 1 ಮತ್ತು 2 ರವರ ಗಾಯದ ಪ್ರಮಾಣ ಪತ್ರಗಳನ್ನು ತನಿಖಾಧಿಕಾರಿಗೆ ನೀಡಿರುತ್ತೇನೆ. ನಾನು ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿಪಿ 8 ಮತ್ತು 9 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 8(ಬಿ) ಮತ್ತು ನಿಪಿ 9(ಬಿ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ- ಆರೋಪಿತರ ಪರ ಶ್ರೀ ಆರ್.ಹೆಚ್.ಬಿ. ವಕೀಲರಿಂದ</u>

1. ಮರದ ದೊಣ್ಣೆ ಮತ್ತು ಕೋಲುಗಳ ನಡುವೆ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ಚಾಸ 1 ಮತ್ತು 2 ರವರು ಸ್ವತಃ ಆಸ್ಪತ್ರೆಗೆ ಬಂದಿದ್ದರು. ಗಾಯದ ಅವಧಿಯ ಕುರಿತು ವಿವರಣೆಯನ್ನು ನಿಪಿ 8 ಮತ್ತು 9 ರಲ್ಲಿ ನೀಡಿಲ್ಲ ಎಂದರೆ ಸರಿ. ಪೊಲೀಸರು ನನ್ನ ಮುಂದೆ ಯಾವುದೇ ಕೋಲು ಮತ್ತು ದೊಣ್ಣೆಗಳನ್ನು ಹಾಜರುಪಡಿಸುವ ಮೂಲಕ ಇದರಿಂದ ಗಾಯ ಉಂಟಾಗುವ ಸಾಧ್ಯತೆ ಇದೆಯೇ ಎಂಬ ವರದಿಯನ್ನು ನನ್ನಿಂದ ಪಡೆದಿರುವುದಿಲ್ಲ. ಒಬ್ಬ ವ್ಯಕ್ತಿ ಕಾಲು ಜಾರಿ ಅಡಿಕೆ ಕಾಲು ಸಂಕದಲ್ಲಿ ಬಿದ್ದಾಗ ನಿಪಿ 8 ಮತ್ತು 9 ರಲ್ಲಿ ನಮೂದಿಸಿರುವ ಗಾಯಗಳು ಉಂಟಾಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ.

<u>ಮರು ವಿಚಾರಣೆಃ ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)**
**ಓದಿ ಹೇಳಿ ಕೇಳಿ ಸರಿ ಇದೆ**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಾಗರ.